ದಿಃ 10-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : ಆಪಾದಿತನ ಪರ ಶ್ರೀ. ಎನ್.ವಿ ವಕೀಲರಿಂದಃ**

ದಿನಾಂಕ 19-07-2016 ರಂದು ನಿಪಿ-2 ರಿಂದ 5 ಅನ್ನು ಹಾಜರುಪಡಿಸಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಫಿರ್ಯಾದಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ 9 ರಲ್ಲಿ ದಿನಾಂಕ 19-07-2016 ಎಂದು ನಮೂದಾಗಿದೆ ಎಂದರೆ ಸರಿ. ಸಾಕಷ್ಟು ಹಣ ಇಲ್ಲ ಎಂದು ದಿನಾಂಕ 19-07-2016 ರಂದು ದಿನಾಂಕವನ್ನು ನಿಪಿ-6 ರಿಂದ 9 ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಿನಾಂಕ 27-07-2016 ರಂದು ತನ್ನ ಬ್ಯಾಂಕ್ ನವರು ತನಗೆ ಹಿಂಬರಹವನ್ನು ನೀಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ನಿಪಿ-6 ರಿಂದ 9 ಅನ್ನು ಪ್ರಗತಿ ಗ್ರಾಮೀಣ ಬ್ಯಾಂಕ್ ರವರು ದಿನಾಂಕ 19-07-2014 ರಂದು ಎಸ್.ಬಿ.ಎಂ ಬ್ಯಾಂಕ್ ರವರಿಗೆ ಕಳುಹಿಸಿದ್ದು ನಂತರ ಸದರಿ ಎಸ್.ಬಿ.ಎಂ ಬ್ಯಾಂಕ್ ರವರು ತನಗೆ ದಿನಾಂಕ 27-07-2016 ರಂದು ಸದರಿ ಹಿಂಬರಹವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-15 ರಿಂದ 18 ರಲ್ಲಿ ಸಾಕಷ್ಟು ಹಣ ಇಲ್ಲ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ-16 ರಿಂದ 18 ರಲ್ಲಿ ನಮೂದಾಗಿದೆ ಎಂದು ನುಡಿಯುತ್ತಾರೆ.

ನಾನು ನಿಪಿ-10 ಅನ್ನು ದಿನಾಂಕ 23-08-2016 ರಂದು ಕೊಟ್ಟಿರುತ್ತೇನೆ ಎಂದರೆ ಸರಿ. ನಿಪಿ-10 ರಂತೆ ನೋಟೀಸ್ ನೀಡುವ ಕಾಲಕ್ಕೆ ಹಿಂಬರಹ ಕೊಟ್ಟ ದಿನಾಂಕದಿಂದ 35 ದಿನ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 26 ದಿನ ಆಗಿತ್ತು ಎಂದು ನುಡಿಯುತ್ತಾರೆ. ದೇವಿಕಾ ರವರಿಗೆ ನೀಡಿದ ಚೆಕ್ಕುಗಳಿಗೆ ಸಂಬಂಧಿಸಿದಂತೆ ಕಾನೂನು ಕ್ರಮ ತೆಗೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಬ್ಯಾಂಕ್ ಮಾಲೂರು ನಲ್ಲಿ ಇರುವುದರಿಂದ ಮತ್ತು ಚೆಕ್ಕುಗಳನ್ನು ಸದರಿ ಬ್ಯಾಂಕ್ ನಲ್ಲಿ ಹಾಜರುಪಡಿಸಿದ್ದ ಕಾರಣ ಈ ನ್ಯಾಯಾಲಯಕ್ಕೆ ವ್ಯಾಪ್ತಿ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು